ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 810
ಸದಸ್ಯರ ಹೆಸರು : ಡಾ॥ ಸಿ.ಆರ್.ಮನೋಹರ್
(ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ)
ಉತ್ತರಿಸಬೇಕಾದ ದಿನಾಂಕ : 15.12.2020
ಉತ್ತರಿಸುವ ಸಚಿವರು : ಸಹಕಾರ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ	ಸಹಕಾರ ಇಲಾಖಾ ವ್ಯಾಪ್ತಿಯ ಕಾರ್ಯಾಲಯಗಳಲ್ಲಿ ಮಂಜೂರಾದ ಮತ್ತು ಖಾಲಿ ಇರುವ ವಿವಿಧ ದರ್ಜೆಯ ಹುದ್ದೆಗಳ ಸಂಖ್ಯೆ ಎಷ್ಟು;	ಸಹಕಾರ ಇಲಾಖೆಯ ವ್ಯಾಪ್ತಿಯ ಕಾರ್ಯಾಲಯಗಳಲ್ಲಿ ಮಂಜೂರಾದ ಮತ್ತು ಖಾಲಿ ಇರುವ ವಿವಿಧ ದರ್ಜೆಯ ಹುದ್ದೆಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.
ಆ	ಸದರಿ ಹುದ್ದೆಗಳನ್ನು ಭರ್ತಿ ಮಾಡಿ ಆಡಳಿತ ವ್ಯವಸ್ಥೆಯನ್ನು ಸುಗಮಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು:	ಖಾಲಿ ಇರುವ ಹುದ್ದೆಗಳ ಪೈಕಿ ಪದೋನ್ನತಿಯ ಹುದ್ದೆಗಳನ್ನು ಕಾಲಕಾಲಕ್ಕೆ ಅರ್ಹ ಅಭ್ಯರ್ಥಿಗಳ ಪದೋನ್ನತಿಯಿಂದ ಭರ್ತಿ ಮಾಡಲಾಗುತ್ತಿದೆ. ನೇರ ನೇಮಕಾತಿಯ ಹುದ್ದೆಗಳಿಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಕರ್ನಾಟಕ ಲೋಕಸೇವಾ ಆಯೋಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರಸ್ತುತ ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ: ಆಇ 03 ಬಿಇಎಂ 2020, ದಿ:06.07.2020 ರನ್ವಯ ಮುಂದಿನ ಆದೇಶದವರೆಗೆ ನೇಮಕಾತಿ ಪ್ರಕ್ರಿಯೆಯನ್ನು ತಡೆಹಿಡಿಯಲಾಗಿದೆ.
ಇ	ಇಲಾಖಾ ಸಿಬ್ಬಂದಿಗಳು ಅವ್ಯವಹಾರಗಳಲ್ಲಿ ತೊಡಗಿದ್ದು, ಎಷ್ಟು ಪ್ರಕರಣಗಳು ಕಳೆದ ಎರಡು ವರ್ಷಗಳಲ್ಲಿ ದಾಖಲಾಗಿವೆ; ಅಂಥವರುಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು?	ಕಳೆದ ಎರಡು ವರ್ಷಗಳಲ್ಲಿ ಸಹಕಾರ ಇಲಾಖೆಯ ವ್ಯಾಪ್ತಿಗೊಳಪಡುವ ಇಲಾಖೆಗಳಲ್ಲಿ ಒಟ್ಟು 36 ಅಧಿಕಾರಿ/ ಸಿಬ್ಬಂದಿಗಳು ಅವ್ಯವಹಾರಗಳಲ್ಲಿ ತೊಡಗಿದ್ದು, ಅವರುಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು, 1957ರನ್ವಯ ಶಿಸ್ತು ಕ್ರಮ ಕೈಗೊಳ್ಳಲಾಗುತ್ತಿದೆ.

ಸಂಖ್ಯೆ: ಸಇ 238 ರರವಿ 2020

(ಎಸ್.ಟಿ.ಸೋಮಶೇಖರ್)
ಸಹಕಾರ ಸಚಿವರು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 810ಕ್ಕೆ ಅನುಬಂಧ

ಕ್ರ.ಸಂ	ಇಲಾಖೆ	ಎ ದರ್ಜೆ		ಬಿ ದರ್ಜೆ		ಸಿ ದರ್ಜೆ		ಡಿ ದರ್ಜೆ	
		ಮಂಜೂರಾದ ಹುದ್ದೆಗಳು	ಖಾಲಿ ಇರುವ ಹುದ್ದೆಗಳು	ಮಂಜೂರಾದ ಹುದ್ದೆಗಳು	ಖಾಲಿ ಇರುವ ಹುದ್ದೆಗಳು	ಮಂಜೂರಾದ ಹುದ್ದೆಗಳು	ಖಾಲಿ ಇರುವ ಹುದ್ದೆಗಳು	ಮಂಜೂರಾದ ಹುದ್ದೆಗಳು	ಖಾಲಿ ಇರುವ ಹುದ್ದೆಗಳು
1	**2**	**3**	**4**	**5**	**6**	**7**	**8**	**9**	**10**
1	ಸಹಕಾರ ಸಂಘಗಳ ನಿಬಂಧಕರು	144	71	442	135	1603	992	468	341
2	ಕೃಷಿ ಮಾರಾಟ ಇಲಾಖೆ	75	20	275	84	2463	1743	658	538
3	ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ	43	17	121	56	1059	776	195	133
4	ಕರ್ನಾಟಕ ರಾಜ್ಯ ಉಗ್ರಾಣ ನಿಗಮ	33	18	88	59	567	330	252	247
5	ಕೃಷಿ ಮಾರಾಟ ಮಂಡಳಿ	19	13	15	15	113	46	32	26
	ಒಟ್ಟು	**314**	**139**	**941**	**349**	**5805**	**3887**	**1605**	**1285**

(ಮಂಜುನಾಥ್ ಬಿ.ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಸಹಕಾರ ಇಲಾಖೆ.